ಬಳ್ಳಾರಿ ಬೆಳಗಾಯಿತು

# ಸಂಗನಕಲ್ಲು ಪ್ರಾಗೈತಿಹಾಸಿಕ ಕಾಲದ ಅತಿದೊಡ್ಡ ಜನವಸತಿ ಪ್ರದೇಶ: ಪ್ರೊ. ಕೋರಿಶೆಟ್ಟರ್

ಬೆಳಗಾಯಿತು ವಾರ್ತೆ

**ಬಳ್ಳಾರಿ:** ನಗರದ ಸಾಂಸ್ಕೃತಿಕ ಸಮುಚ್ಚಯ ಆವರಣದಲ್ಲಿರುವ ರಾಬರ್ಟ್ ಬ್ರೂಸ್ ಫೂಟ್ ಸಂಗನಕಲ್ಲು ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಪ್ರಾಚ್ಯವಸ್ತುಗಳ ದಾಖಲೀಕರಣ ಕುರಿತು ಮೂರು ದಿನಗಳ ಕಾರ್ಯಾಗಾರ ಸೋಮವಾರ ಆರಂಭಗೊಂಡಿತು.

ವಸ್ತುಸಂಗ್ರಹಾಲಯಗಳ ಕಾರ್ಯವೈಖರಿ ಕುರಿ ತು ಪರಿಚಯ ಮತ್ತು ತರಬೇತಿ, ಪ್ರಾಚ್ಯ ವಸ್ತುಗಳೊಂದಿಗೆ ಮುಖಾಮುಖಿ, ಪ್ರಾಚ್ಯ ವಸ್ತು ದಾಖಲೀಕರಣಕ್ಕೆ ಸಂಬಂಧಿಸಿದಂತೆ ವಸ್ತು ಸಂಗ್ರಹಾಲ ಯದ ಗೌರವ ನಿರ್ದೇಶಕರಾದ, ಪ್ರೊ. ರವಿ ಕೋರಿಶೆಟ್ಟರ್, ವಸ್ತು ಸಂಗ್ರಹಾಲಯದ ತಜ್ಞರಾದ ಸಂಜನಾ



ಪ್ರಾಚ್ಯವಸ್ತುಗಳ ದಾಖಲೀಕರಣ ಕಾರ್ಯಾಗಾರ

ರಂಗನ್ ಅವರು ಶಿಬಿರಾರ್ಥಿಗಳಿಗೆ ವಿವರವಾಗಿ ತಿಳಿಸಿಕೊಟ್ಟರು.

ಪ್ರೊ. ಕೋರಿಶೆಟ್ಟರ್ ಅವರು ಸಂಗನಕಲ್ ಪ್ರಾಗೈತಿಹಾಸಿಕ ಪ್ರದೇಶದ ಬಗ್ಗೆ ವಿವರಿಸುತ್ತಾ ಐದುಸಾವಿರ ವರ್ಷದ ಹಿಂದೆ ದಕ್ಷಿಣ ಭಾರತ ದಲ್ಲಿಯೇ ಅತೀ ದೊಡ್ಡ ಜನ ವಸತಿ ಪ್ರದೇಶಗಳಲ್ಲಿ ಒಂದಾಗಿದೆ ಹಾಗೂ ಇಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಕಲ್ಲಿನ ಆಯುಧಗಳ ತಯಾರಿಕಾ ಪ್ರದೇಶವಾಗಿತ್ತು ಎಂದರು. ಆ ಕಾಲದಲ್ಲಿಯೇ ಆಗಿನ ಜನ ಕೃಷಿ ಚಟು ವಟಿಕೆಯಲ್ಲಿ ತೊಡಗಿದ್ದ ಬಗ್ಗೆ ಸಂಶೋಧ ನೆಯಿಂದ ತಿಳಿದ ಬಳಿಕ ಪ್ರಾಮುಖ್ಯತೆ ಪಡೆದು ಕೊಂಡಿತು ಎಂದರು.

ಈ ಸಂದರ್ಭದಲ್ಲಿ ವಸ್ತು ಸಂಗ್ರಹಾಲಯದ ಸದಸ್ಯರಾದ ಎಂ. ಅಹಿರಾಜ್, ಸಂತೋಷ ಮಾರ್ಟಿನ್, ಮ್ಯೂಸಿಯಂ ಇನ್‌ಚಾರ್ಜ್ ಗೌರಿ ಸೇರಿದಂತೆ ಅನೇಕರು ಇದ್ದರು.


Powered by: erelego.com